**ಸಾಕ್ಷಿಯನ್ನು ದಿಃ *10/06/2024* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
***ಮುಂದುವರೆದ ಪಾಟೀ ಸವಾಲು : ವಾದಿ ಪರ ವಕೀಲರಿಂದ.***

ಸಂಗಮ ಸರ್ಕಲನಲ್ಲಿರುವ ಚಿಲ್ಲಿ ಚೌ ಅಂಗಡಿ 10 ವರ್ಷಗಳಿಂದ ಇರುತ್ತದೆ. ಸದರಿ ಚಿಲ್ಲಿ ಚೌ ಅಂಗಡಿ ಯಾರು ಕಟ್ಟಿರುತ್ತಾರೆ ಎಂದು ನನಗೆ ನೆನಪಿಲ್ಲ. ಸದರಿ ಚಿಲ್ಲಿ ಚೌ ಅಂಗಡಿಯನ್ನು ಶಂಕರರಾವ ರೇಗೆ ಇವರ ಮೊಮ್ಮಗ ಗೀತೇಶ ರೇಗೆಯವರು ನಡೆಸುತ್ತಾರೆ. ಸದರಿ ಅಂಗಡಿಯ ಲೆಕ್ಕ ಪತ್ರಗಳ ಕುರಿತು ನನಗೆ ಗೊತ್ತಿಲ್ಲ. ರೀತೇಶ ಇವರು ಈ ದಾವೆಗೆ ಪಕ್ಷಗಾರರು ಇರುತ್ತಾರೆ. ಸದರಿ ಆಸ್ತಿ ಅಂಗಡಿಯನ್ನು ಒಳಗೊಂಡು ರೇಗೆಯವರು ಮನೆತನದ ಒಟ್ಟು ಕುಟುಂಬದ ಆಸ್ತಿ ಎಂದರೆ ಸಾಕ್ಷಿದಾರರು ಮಾಧವರಾವ ಇವರಿಗೆ ಸಂಬಂಧಿಸಿದ ಆಸ್ತಿ ಎಂದು ಉತ್ತರಿಸುತ್ತಾರೆ. ಸದರಿ ಆಸ್ತಿ ಅಂಗಡಿಯೊಳಗೊಂಡು ಮಾಧವರಾವ ಒಬ್ಬರಿಗೆ ಸಂಬಂಧಿಸಿದ್ದು ಹೇಳಿರುವ ಹೇಳಿಕೆಗೆ ಪುರಾವೆ ನೀಡಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ಕೊಟ್ಟಿರುತ್ತೇನೆ ಎಂದು ಉತ್ತರಿಸುತ್ತಾರೆ, ಸದರಿ ಆಸ್ತಿ ಉತಾರವನ್ನು ಹಾಜರುಪಡಿಸಿರುತ್ತೇನೆ. ಸದರಿ ಆಸ್ತಿಯನ್ನು ಮಾಧವರಾವ ಇವರಿಗೆ ಹೇಗೆ ಬಂತು ಎಂದರೆ ಸಾಕ್ಷಿದಾರರು ಅವರ ಸ್ವಂತ ದುಡುಮೆಯಿಂದ ಪಡೆದುಕೊಂಡಿರುವ ಆಸ್ತಿ ಎಂದು ಉತ್ತರಿಸುತ್ತಾರೆ, ಆದರೆ ಯಾರಿಂದ ಎಷ್ಟು ಪ್ರತಿಫಲಕ್ಕೆ, ಯಾವ ಇಸ್ವಿಯಲ್ಲಿ ವೆಗೈರೆ ವಿಷಯ ಸಂಗತಿಗಳು ನನಗೆ ಗೊತ್ತಿಲ್ಲ.

ವಿವಾದಿತ ಆಸ್ತಿಗಳಲ್ಲಿ ಎಷ್ಟು ಜನ ಬಾಡಿಗೆದಾರರು ಇದ್ದಾರೆ, ಅವರಿಂದ ಎಷ್ಟು ಬಾಡಿಗೆ ಪಡೆಯುತ್ತಾರೆ, ಈ ವಿಷಯ ಸಂಗತಿಗಳ ಬಗ್ಗೆ ನನಗೆ ನೆನಪಿಲ್ಲ. ಸಂಗಮ ಸರ್ಕನಲ್ಲಿರುವ ಆಸ್ತಿಯಲ್ಲಿ ವಿನಿತ ಮೆಡಿಕಲ್ಸ ಎನ್ನುವ ಆಸ್ಪತ್ರೆ ಮತ್ತು ಔಷಧ ಅಂಗಡಿ ಇರುತ್ತದೆ ಎಂದರೆ ನಿಜ. ಸದರಿ ಔಷಧಿ ಅಂಗಡಿ 10 ವರ್ಷಕ್ಕಿಂತ ಮುಂಚಿತವಾಗಿ ಅಲ್ಲಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿಯವರು ಎಷ್ಟು ಬಾಡಿಗೆ ಮತ್ತು ಠೇವಣಿ ಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಮ್ಮ ರೇಗೆ ಮನೆತನದ ಆಸ್ತಿಗಳಲ್ಲಿ ಯಾರು ಯಾರು ಬಾಡಿಗೆದಾರರು ಇದ್ದಾರೆ, ಎಷ್ಟು ಬಾಡಿಗೆ ಬರುತ್ತದೆ ಮತ್ತು ಎಷ್ಟು ಠೇವಣಿ ಕೊಟ್ಟಿರುತ್ತಾರೆ ಎಂದು ನನಗೆ ಮಾಹಿತಿ ಇದೆ, ಆದರೆ ನೆನಪಿಲ್ಲ. ವಿನಿತ ಔಷಧ ಅಂಗಡಿಯವರು 5 ಲಕ್ಷ ರೂಪಾಯಿ ಡಿಪಾಜಿಟ ಮತ್ತು ಮಾಸಿಕ 5 ಸಾವಿರ ರೂಪಾಯಿ ಬಾಡಿಗೆ ಕೊಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ಹೇಳಿಕೆಯನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಅಮಿತ ಬಡ್ಡಿಮನಿ

ಫೈನಾನ್ಸ ಇವರ ಅಂಗಡಿಯ ಬಾಡಿಗೆ ವಿಷಯ ಸಂಗತಿ ನನಗೆ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸುಭಾಶ ರಸ್ತೆಯಲ್ಲಿರುವ ಮೊಬೈಲ ಅಂಗಡಿ, ನ್ಯೂ ಸ್ಟೆಫಿನ ಶೂ ಅಂಗಡಿ, ಇವುಗಳ ಬಾಡಿಗೆ ಹಣವನ್ನು ಈ ಮೊದಲು ನನ್ನ ತಂದೆ ಪಡೆಯುತ್ತಿದ್ದು, ಪ್ರಸ್ತುತ ನನ್ನ ತಾಯಿ ಪಡೆಯುತ್ತಿದ್ದಾರೆ ಎಂದರೆ ಸರಿಯಲ್ಲ. ಸದರಿ ಬಾಡಿಗೆ ಹಣದ ಕುರಿತು ನ್ಯಾಯಾಲಯದ ಆದೇಶದ ಪ್ರಕಾರ ಯಾವುದೇ ರೀತಿಯ ಮಾಹಿತಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಒಬ್ಬ ಅಲ್ತಾಫ ಕಿತ್ತೂರ ಎನ್ನುವವರು ಶೂ ಅಂಗಡಿಯನ್ನು ಬಾಡಿಗೆಯಲ್ಲಿ ನಡೆಸುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ರೀಗಲ್ ಸರ್ಕಲ ಹತ್ತಿರ ಮೊದಲು ಗುರುರಾಜ ಹೋಟೇಲ ಇದ್ದು ನಂತರ ಮಹಾಲಕ್ಷ್ಮೀ ಹೋಟೇಲ ಆಗಿದ್ದು, ಪ್ರಸ್ತುತ ನ್ಯೂ ಉಡುಪಿ ಹೋಟೇಲ ಎಂದು ಆಗಿದ್ದು, ಸದರಿ ಹೋಟೇಲ ಬಾಡಿಗೆ ಕೊಡುವಾಗ ನ್ಯಾಯಾಲಯದ ಅನುಮತಿ ಪಡೆದು ಅದರಂತೆ ಬಾಡಿಗೆ ಕೊಟ್ಟಿದ್ದೇವೆ ಎಂದರೆ ನಿಜ. ಸದರಿ ನ್ಯೂ ಉಡುಪಿ ಹೋಟೇಲನವರು ಎಷ್ಟು ಡಿಪಾಜಿಟ ಕೊಟ್ಟಿದ್ದಾರೆ ಮತ್ತು ಎಷ್ಟು ಬಾಡಿಗೆ ಕೊಡುತ್ತಾರೆ ಎಂದು ನನಗೆ ಗೊತ್ತಿಲ್ಲ. 2022 ನೇ ಇಸ್ವಿಯಿಂದ ಸದರಿಯವರು ಹೋಟೇಲ ನಡೆಸುತ್ತಿದ್ದಾರೆ ಎಂದರೆ ಸಾಕ್ಷಿದಾರರು ಇತ್ತೀಚಿಗೆ ಬಂದಿರುತ್ತಾರೆ ಎಂದು ಉತ್ತರಿಸುತ್ತಾರೆ. ಈ ನ್ಯಾಯಾಲಯದ ಆದೇಶದ ಪ್ರಕಾರ ಸದರಿ 2/11 ಅಂಶ ಬಾಡಿಗೆಯನ್ನು ಮತ್ತು ಡಿಪಾಜಿಟ ಹಣವನ್ನು ಠೇವಣಿ ಮಾಡಬೇಕೆಂಬ ಆದೇಶವನ್ನು ಪಾಲಿಸಿಲ್ಲ ಎಂದರೆ ಸರಿಯಲ್ಲ. ಸದರಿ ಉಡುಪಿ ಹೋಟೇಲನಿಂದ ಇವತ್ತಿನವರೆಗೂ ಬಾಡಿಗೆ ಹಣ ಸಂದಾಯವಾಗಿದೆ ಇಲ್ಲವೂ ಎಂದು ನಾನು ನೋಡಿಕೊಳ್ಳಬೇಕಾಗುತ್ತದೆ. ಮಾನ್ಯ ಉಚ್ಚ ನ್ಯಾಯಾಲಯದ ಆದೇಶ ಮತ್ತು ಈ ನ್ಯಾಯಾಲಯದ ಆದೇಶದ ಕುರಿತು ನಾನು ಒಂದು ಬಾರಿ ನೋಡಿಕೊಳ್ಳಬೇಕಾಗುತ್ತದೆ, ಪ್ರಸ್ತುತ ನೆನಪಿಲ್ಲ. ಸದರಿ ಆದೇಶಗಳನ್ನು ಉಲ್ಲಂಘಣೆ ಮಾಡಿ ನಾನು ಬಾಡಿಗೆ ಮೊತ್ತವನ್ನು ಆದೇಶದ ಪ್ರಕಾರ ಜಮೆ ಮಾಡಿಲ್ಲ ಎಂದರೆ ಸರಿಯಲ್ಲ. ಸದರಿ ಆದೇಶದ ಪ್ರಕಾರ ಯಾವ ಯಾವ ಬಾಡಿಗೆದಾರರಿಂದ ಎಷ್ಟು ಬಾಡಿಗೆ ಪಡೆದುಕೊಂಡಿದ್ದೇವೆ ಮತ್ತು ಎಷ್ಟು ಜಮೆ ಮಾಡಿದ್ದೇವೇ ಎನ್ನುವ ಲೆಕ್ಕಾಚಾರವನ್ನು ಇಟ್ಟುಕೊಂಡಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ನಮ್ಮ ಕಬ್ಜೆಯಲ್ಲಿರುವ ಆಸ್ತಿಗಳ ಬಾಡಿಗೆ ಲೆಕ್ಕಾಚಾರಗಳನ್ನು ಮಾತ್ರ ಇಟ್ಟುಕೊಂಡಿದ್ದೇವೆ ಎಂದು ಉತ್ತರಿಸುತ್ತಾರೆ. ನ್ಯಾಯಾಲಯದ

ಆದೇಶದ ಪ್ರಕಾರ ಎಲ್ಲ ವ್ಯಾಪಾರ ಸಂಬಂಧಿತ ಮಳಿಗೆಗಳ ಬಾಡಿಗೆಯ ಲೆಕ್ಕಾಚಾರ ಇಟ್ಟುಕೊಂಡಿಲ್ಲ. ಆದ್ದರಿಂದ ನ್ಯಾಯಾಲಯದ ಆದೇಶ ಉಲ್ಲಂಘಣೆ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಸುಭಾಶ ರಸ್ತೆಯಲ್ಲಿರುವ ಜಿ.ಕೆ.ಮೆಹತಾ ಎನ್ನುವವರಿಗೆ ಬಟ್ಟೆ ಅಂಗಡಿಯನ್ನು ಬಾಡಿಗೆಗೆ ಕೊಟ್ಟಿದ್ದೇವೆ ಎಂದರೆ ನಿಜ. ಸದರಿಯವರು ಅಂದಾಜು 40 ವರ್ಷಗಳಿಂದ ಬಾಡಿಗೆಯಲ್ಲಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿಯವರು ಠೇವಣೆ ಕೊಟ್ಟಿದ್ದು ನನಗೆ ಗೊತ್ತಿಲ್ಲ, ಆದರೆ ಬಾಡಿಗೆ ಎಷ್ಟು ಕೊಟ್ಟಿದ್ದಾರೆ ಎಂದು ನೋಡಿ ಹೇಳಬೇಕಾಗುತ್ತದೆ. ಸದರಿಯವರು ಎಸ್‌ಬಿಐ ಬ್ಯಾಂಕಿನ ಚೆಕ್ಕ ನಂ. 563645 ನ ಮುಖಾಂತರ 8 ಲಕ್ಷ ರೂಪಾಯಿಗಳನ್ನು ಮುಂಗಡ ಬಾಡಿಗೆ ಹಣವನ್ನು ದಿಃ01-10-2004 ರಂದು ನೀಡಿರುತ್ತಾರೆ ಎಂದರೆ ಸಾಕ್ಷಿದಾರರು ಸದರಿ ವಿಷಯ ಸಂಗತಿ ವಾಸುದೇವ ರೇಗೆ ಇವರು ನೋಡಿಕೊಳ್ಳುತ್ತಿದ್ದರು, ಈ ಕುರಿತು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸದರಿ ಚೆಕ್ಕಿನ ಮೊತ್ತ ನನ್ನ ತಂದೆ ಜಗದೀಶ ರೇಗೆ ಇವರ ಖಾತೆಗೆ ಜಮೆ ಆಗಿರುತ್ತದೆ ಎಂದರೆ ಸರಿಯಲ್ಲ. ಹೀಗಿದ್ದರೂ ಸಹ ಬಾಡಿಗೆ ವ್ಯವಹಾರ ವಾಸುದೇವ ರೇಗೆ ಇವರು ನೋಡಿಕೊಳ್ಳುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹೀಗೆ 8 ಲಕ್ಷ ರೂಪಾಯಿ ಮುಂಗಡ ಬಾಡಿಗೆ 7 ಲಕ್ಷ ಭದ್ರತಾ ಠೇವಣೆ ನನ್ನ ತಂದೆಯ ಕೈಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

ಸರಸ್ವತಪೂರದಲ್ಲಿರುವ ಮನೆಯ ಒಂದು ವರ್ಷ ತೆರಿಗೆ ಎಷ್ಟು ಬರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ನ್ಯಾಯಾಲಯದ ಆದೇಶದ ಪ್ರಕಾರ ಸದರಿ ತೆರಿಗೆ ಯಾರು ತುಂಬಬೇಕು ಎಂಬ ಪ್ರಶ್ನೆಗೆ ಸಾಕ್ಷಿದಾರರು ಬಾಡಿಗೆ ಪಡೆದುಕೊಳ್ಳುವವರು ತುಂಬಬೇಕು ಎಂದು ಉತ್ತರಿಸುತ್ತಾರೆ. ಸಾಕ್ಷಿದಾರರು ಮುಂದುವರೆದು ಒಂದು ಬಾರಿ ನಾನು ನೋಡಿಕೊಂಡು ಹೇಳಬೇಕಾಗುತ್ತದೆ ಎಂದು ಪುನಃ ಉತ್ತರಿಸಿರುತ್ತಾರೆ.  ಈ ರೀತಿ ಇರುವಾಗ 2006 ನೇ ಇಸ್ವಿಯಿಂದ ಸದರಿ ತೆರಿಗೆ ಯಾರು ತುಂಬಿದ್ದಾರೆ ಎಂದು ಹೇಳಲು ಬರುವುದಿಲ್ಲ. ನ್ಯಾಯಾಲಯದ ಆದೇಶದ ಪ್ರಕಾರ ಬಾಡಿಗೆ ಸಂದಾಯದ ಇಷ್ಟು ಪ್ರತಿಶತ ಎಲ್ಲಿಯವರೆಗೆ ತುಂಬಿದ್ದಿರಿ ಎಂಬ ಪ್ರಶ್ನೆಗೆ ಸಾಕ್ಷಿದಾರರು 2021 ರವರೆಗೆ ತುಂಬಿರುತ್ತೇವೆ ಎಂದು ಉತ್ತರಿಸುತ್ತಾರೆ. 2021 ನೇ ಇಸ್ವಿಯ ನಂತರ ಶಂಕರರಾವ ಇವರ ಮೊಮ್ಮಗ ದೀಪಕ ರೇಗೆ ಇವರು ಬಾಡಿಗೆದಾರರಿಗೆ ನ್ಯಾಯಾಲಯದಲ್ಲಿ ದಾವೆ ಚಾಲ್ತಿಯಲ್ಲಿರುತ್ತದೆ, ಬಾಡಿಗೆಯನ್ನು ಕೊಡಬೇಡಿ ಎಂದು

ಹೇಳಿದಕ್ಕೆ ಕೆಲವರು ಬಾಡಿಗೆ ಹಣ ಕೊಟ್ಟಿಲ್ಲ, ಆದ್ದರಿಂದ ತುಂಬಲು ಆಗಲಿಲ್ಲ ಎಂದು ಹೇಳುತ್ತಾರೆ. ಈ ಕುರಿತು ನಾವು ಈ ನ್ಯಾಯಾಲಯಕ್ಕೆ ಆಗಲಿ ಅಥವಾ ಮಾನ್ಯ ಉಚ್ಚ ನ್ಯಾಯಾಲಯದ ಗಮನಕ್ಕೆ ತಂದು ಅದರ ಕ್ರಮ ಕೈಗೊಂಡಿದ್ದೇವೆ ಇಲ್ಲವೂ ಎಂದು ನಮ್ಮ ವಕೀಲರಿಗೆ ಕೇಳಬೇಕಾಗುತ್ತದೆ. ಈ ರೀತಿ ಕಳೆದ ತಿಂಗಳಲ್ಲಿ ಯಾರು ಬಾಡಿಗೆ ಕೊಟ್ಟರು ಅಥವಾ ಕೊಟ್ಟಿಲ್ಲ ಎನ್ನುವುದು ನನಗೆ ಖಚಿತವಾಗಿ ಹೇಳಲು ಬರುವುದಿಲ್ಲ. ನಾವು ಪ್ರತಿ ತಿಂಗಳ ಬಾಡಿಗೆ ಪಡೆದುಕೊಂಡರು 2021 ನೇ ಇಸ್ವಿಯಿಂದ ಕೆಲವರು ಬಾಡಿಗೆ ಕೊಟ್ಟಿಲ್ಲ ಆದ್ದರಿಂದ ನ್ಯಾಯಾಲಯಕ್ಕೆ ಜಮೆ ಮಾಡಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ಅರ್ಜಿ ಕೊಡುವಾಗ ಕೆಲವರು ಹೊಸ ಬಾಡಿಗೆದಾರರು ಇರುತ್ತಾರೆ ಎಂದು ಬರೆದುಕೊಂಡಿದ್ದು ಇರುತ್ತದೆ ಎಂದರೆ ನಿಜ. ಈ ರೀತಿ ಹೊಸ ಬಾಡಿಗೆದಾರರು ಎಷ್ಟು ಜನ ಇರುತ್ತಾರೆ ಎಂದು ನನಗೆ ಹೇಳಲು ಬರುವುದಿಲ್ಲ. 5 ಜನ ಬಾಡಿಗೆದಾರರು ಹೊಸಬರು ಬಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಹೊಸ ಬಾಡಿಗೆದಾರರು ಎಂದು ಬರೆದುಕೊಂಡಿರುವ ಹಾಗೇ ನಾವು ಬಾಡಿಗೆಗೆ ಕೊಟ್ಟಿರುತ್ತೇವೆ. ಹೀಗೆ ಹೊಸ ಬಾಡಿಗೆದಾರರಿಗೆ ಬಾಡಿಗೆ ಕೊಡುವಾಗ ನ್ಯಾಯಾಲಯದ ಪರವಾನಿಗೆ ಪಡೆದುಕೊಂಡಿದ್ದೇವೆ ಇಲ್ಲವೂ ನನಗೆ ಗೊತ್ತಿಲ್ಲ, ಸದರಿ ಸಂಗತಿ ನಮ್ಮ ವಕೀಲರಿಗೆ ಗೊತ್ತು. ನಮ್ಮ ವಕೀಲರು ಎಂದರೆ ಡವಲೇಶ್ವರ ಮತ್ತು ಪ್ರೀತಂ ರೇಗೆ ಇವರು. ಬಾಡಿಗೆ ವ್ಯವಹಾರ ಎಲ್ಲವೂ ಪ್ರೀತಂ ರೇಗೆ ಇವರು ಮಾಡುತ್ತಾರೆ ಎಂದರೆ ಸಾಕ್ಷಿದಾರರು ಬಾಡಿಗೆ ವ್ಯವಹಾರ ನಮ್ಮ ತಾಯಿ ಮಾಡುತ್ತಾರೆ, ನ್ಯಾಯಾಲಯದ ವ್ಯವಹಾರ ಪ್ರೀತಂ ರೇಗೆರವರು ನೋಡಿಕೊಳ್ಳುತ್ತಾರೆ. ಜಗದೀಶ ರೇಗೆ ಇವರು ಜೀವಂತವಿರುವವರೆಗೆ ಬಾಡಿಗೆ ವ್ಯವಹಾರ ಅವರು ನೋಡಿಕೊಳ್ಳುತ್ತಿದ್ದರು, ಅವರ ಮರಣದ ನಂತರ ನನ್ನ ತಾಯಿ ಹೆಸರು ನಾಮ ಮಾತ್ರಕ್ಕೆ ಇದ್ದು ಎಲ್ಲ ವ್ಯವಹಾರ ಪ್ರೀತಂ ರೇಗೆ ಮಾಡುತ್ತಾರೆ ಎಂದರೆ ಸುಳ್ಳು. ಈ ರೀತಿ ಇರುವಾಗ ಸದರಿ ಪ್ರೀತಂ ರೇಗೆ ಇವರು ಬಾಡಿಗೆ ಹಣವನ್ನು ತಮ್ಮ ಸ್ವಂತಕ್ಕೆ ಬಳಸಿಕೊಂಡಿದ್ದಾರೆ ಎಂದರೆ ಸರಿಯಲ್ಲ.

ಸಂಗಮ ಸರ್ಕಲನಲ್ಲಿರುವ ಕಟ್ಟಡದಲ್ಲಿ ಸುರೇಶ ಟೇಲರ ಎನ್ನುವವರು ಬಾಡಿಗೆ ಬಿಟ್ಟು ಹೋದ ಮೇಲೆ ಅದನ್ನು ವಿಸ್ತ್ರುತ ಮಾಡಿಕೊಂಡು ಟಾಯರ ಅಂಗಡಿಯನ್ನು ಗೀತೇಶ ಎನ್ನುವವರು ನಡೆಸುತ್ತಾರೆ

ಎಂದರೆ ನಿಜ. ಹೀಗೆ ನಮ್ಮ ಮನೆತನದ ಆಸ್ತಿಗಳನ್ನು ನಮ್ಮ ಅನುಕೂಲಕ್ಕೆತಕ್ಕಂತೆ ಪರಿವರ್ತಿಸಿ ವಾದಿಯರಿಗೆ ಲುಕ್ಸಾನ ಮಾಡಿದ್ದೇವೆ ಎಂದರೆ ಸರಿಯಲ್ಲ.

***ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ ಕಾಲವಕಾಶ ಕೋರಿದ ಮೇರೆಗೆ ಮುಂದೂಡಲಾಯಿತು.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ.